ಈ ಪತ್ರವನ್ನೋದಿ ನಿಮ್ಮ ಹರೆಯದ ದಿನಗಳ ಕನವರಿಕೆಗಳು ನೆನಪಾದವೇ? ಹಳೆಯ ಡೈರಿಯ ಮಧ್ಯದಲ್ಲಿ ಬಚ್ಚಿಟ್ಟಿದ್ದ ಎಷ್ಟೋ ವರ್ಷಗಳ ಹಿಂದಿನ ಒಲವಿನೋಲೆ ಸ್ಮೃತಿಗೆ ಬಂತೇ? ನಿಮ್ಮ ಗೆಳೆಯ/ತಿಯನ್ನು ಮೆಚ್ಚಿಸುವ ಹಾಗೆ ಪತ್ರಬರೆಯುವ ಯತ್ನದಲ್ಲಿ, ಬರೆದು ಹರಿದ ಹಾಳೆಗಳು, ನಿದ್ದೆಗೆಟ್ಟ ರಾತ್ರಿಗಳು ಕಣ್ಮುಂದೆ ಹಾದು ಹೋದವೆ? ಮುರಿದ ಪ್ರೇಮದ ನೆನಪೋ, ಚಿಗುರಿದ ಒಲವ ಒನಪೋ ಮನಸ್ಸಿಗೆ ಬಂದು ಮುದವೆನಿಸಿತೆ? ಹಾಗಿದ್ದರೆ ನೀವು ಧನ್ಯರು!

ಯಾಕೆಂದರೆ ಪತ್ರಗಿತ್ರದ ಹಂಗು ಮೀರಿದ, ಅಂಚೆಯಣ್ಣನ ಅನುಮಾನದ ಕಣ್ಣೋಟದ ಮುಜುಗರದ ಅರಿವಿಲ್ಲ, ಕಾದು ಭೇಟಿಯಾಗುವ ಕಾತರತೆಯ ಪರಿಚಯವಿಲ್ಲದ 'ಇನ್‌ಸ್ಟಂಟ್ ಲವ್'ನ ಹೊಸ ತಲೆಮಾರೊಂದು ಕಣ್ಣ ಮುಂದೆ ಬೆಳೆದು ನಿಂತಿದೆ. ಎಂಬತ್ತರ ದಶಕದ ಅಥವಾ ಅದಕ್ಕಿಂತ ಹಿಂದಿನವರಾಗಿದ್ದರೆ ನಿಮಗೆ ಪ್ರೇಮ ವ್ಯವಹಾರದಲ್ಲಿ ಪತ್ರಗಳ ಪ್ರಾಮುಖ್ಯ ಎಷ್ಟಿತ್ತೆಂಬುದನ್ನು ವಿವರಿಸಿ ಹೇಳುವ ಅಗತ್ಯವೇ ಇಲ್ಲ.

## ಹೈಸ್ಕೂಲ್ ಕ್ರಶ್

ಸಾಮಾನ್ಯವಾಗಿ ಮೊದಲ ಪ್ರೇಮಾಂಕುರದ ನೆನಪು ನಮ್ಮನ್ನು ಹೈಸ್ಕೂಲು ದಿನಗಳಿಗೇ ಕೊಂಡೊಯ್ಯುತ್ತದೆ. ಅದು ಲವ್ ಅಲ್ಲ, ಕ್ರಶ್ ಎಂಬೆಲ್ಲ ವಿಶ್ಲೇಷಣೆಗಳು ಏನೇ ಇರಲಿ, ಆದರೆ ಆ ಮೊದಲ 'ಪ್ರೇಮ' ಕೊಟ್ಟ ಹಸಿಬಿಸಿ ಭಾವಗಳು, ಜೊತೆಜೊತೆಗೇ ಉಕ್ಕುವ ಅಪರಾಧಿ ಪ್ರಜ್ಞೆ, ಒಂದೇ ಕಣ್ಣೋಟ, ಅರೆಚಣ ಹೌದೋ ಅಲ್ಲವೋ ಎಂದು ಹಾದು ಹೋದ ಹುಸಿನಗೆ ಎದೆಯಲ್ಲಿ ಎಬ್ಬಿಸಿದ ಕೋಲಾಹಲ, ನಿದ್ದೆಯಿಲ್ಲದ ರಾತ್ರಿಗಳಲ್ಲಿ ಹರಿದಾಡುವ ಕಲ್ಪನಾಲಹರಿ ಹುಟ್ಟಿಸುವ ರೋಮಾಂಚನಗಳು ಮಾತ್ರ ಹುಸಿಯಲ್ಲ.

ಆಗಿನ ಹಸಿಬಿಸಿ ತಲ್ಲಣಗಳಿಗೆ, ಹೇಳಲೋ ಬೇಡವೋ, ಹೇಳಿದರೆ ಒಪ್ಪಿಕೊಳ್ಳುವಳೋ/ನೋ ಇಲ್ಲವೋ, ಹೇಳುವುದಾದರೆ ಹೇಗೆ, ಪತ್ರ ಬರೆಯಲಾ ಇಲ್ಲಾ ಚಿತ್ರಬಿಡಿಸಲಾ ಎಂಬೆಲ್ಲ ಬಗೆಹರಿಯದ ಗೊಂದಲಗಳಿಗೆ ಅಭಯಹಸ್ತ ನೀಡುವುದು ನೋಟ್‌ಬುಕ್ಕಿನ ಕೊನೆಯ ಹಾಳೆ. ಅಲ್ಲಿಯವರೆಗೆ ಊಟ–ಪಾಠ, ಕಾಲೆಳೆಯುವ ಮೋಜಿನ ಆಟ ಎಲ್ಲದರಲ್ಲಿಯೂ ಜಗಜ್ಜಾಹೀರಾಗಿದ್ದವರು ಒಮ್ಮಿಂದೊಮ್ಮೆಲೇ 'ಖಾಸಗೀಕರಣ'ಗೊಂಡುಬಿಡುತ್ತಾರೆ. ಜೀವದ ಗೆಳೆಯ/ತಿಯರಿಂದಲೂ 'ಸುರಕ್ಷಿತ ಅಂತರ' ಕಾಯ್ದುಕೊಂಡು ತನ್ನಷ್ಟಕ್ಕೇ ನಗುವ, ಪಾಠ ಕೇಳಿಯೂ ಕೇಳದ ಹಾಗೆ ಮರೆಯುವ ಆಟಗಳ ಹಿಂದಿನ ಭಾವಗಳು ರೂಪುತಳೆಯುವುದೂ ನೋಟ್ ಬುಕ್ಕಿನ ಕೊನೆಯ ಹಾಳೆಯಲ್ಲಿಯೇ. ಅಲ್ಲಿ ಬರೆದ ಸಾಲುಗಳಿಗೆ ಧೈರ್ಯ ಬಂದು ಉದ್ದೇಶಿತ ಗುರಿ ತಲುಪುವುದಕ್ಕೆ ಅದಿನ್ನೆಷ್ಟು ಕಾಯಬೇಕೋ. ತಲುಪಿಯೂ ಆತ್ಮಹತ್ಯೆ ಮಾಡಿಕೊಳ್ಳುವ ಹಾಳೆಗಳೇ ಹೆಚ್ಚು.

ಹಿಂದೆಲ್ಲ ಹೈಸ್ಕೂಲು ಟೈಮಲ್ಲಿ ಹುಡುಗರ ಪಾಲಿಗೆ ಲವ್ ಲೆಟರ್ ಕೊಡುವುದು ಎಂದರೆ ಅದು ಒಂದು ರೀತಿ ಧೈರ್ಯ ಪ್ರದರ್ಶನದ ಪ್ರಾತ್ಯಕ್ಷಿಕೆಯಾಗಿರುತ್ತಿತ್ತು. ಹಾಗಾಗಿಯೇ ಅವಳು ತಿರಸ್ಕರಿಸುತ್ತಾಳೆ ಎಂದು ಖಾತ್ರಿಯಾಗಿದ್ದೂ ನೂರು ಕಾಗುಣಿತ ದೋಷಗಳಿದ್ದ ಪತ್ರವನ್ನು ನೀಟಾಗಿ ಮಡಿಸಿ, ಕವರಿನಲ್ಲಿಟ್ಟು, ಹುಡುಗಿ ಒಬ್ಬಂಟಿಯಾಗಿದ್ದ ಸಮಯ ಹೊಂಚು ಹಾಕಿಯೋ ಅಥವಾ ಅವಳ ಗೆಳತಿಯ ಸಹಾಯ ಪಡೆದುಕೊಂಡೋ ಪ್ಯಾಂಟಿನ ಯಾವುದೋ ಜೇಬಲ್ಲಿದ್ದ ಪತ್ರವನ್ನು ಸರಕ್ಕನೆ ಎಳೆದು ಕೊಡುವ ಗತ್ತಿನಲ್ಲಿಯೇ ಗೆಳೆಯರ ಗುಂಪಿನಲ್ಲಿ ಹುಡುಗನ ಸ್ಥಾನಮಾನ ನಿಕ್ಕಿಯಾಗುತ್ತಿತ್ತು. ಅವರಲ್ಲಿ ಕೆಲವು ಧೀರರು ತಮ್ಮ ಪ್ರೇಮದ ಆಳವನ್ನು ಸಾಬೀತುಗೊಳಿಸಲು ರಕ್ತದಿಂದ ಅಕ್ಷರಗಳನ್ನು ಬರೆಯುವುದೂ ಇತ್ತು.

ಅದೇ ಹುಡುಗಿಯರಿಗೆ ಪ್ರೇಮ ಪತ್ರ ಪಡೆದುಕೊಳ್ಳುವುದೂ ಅಷ್ಟೇ ಪ್ರತಿಷ್ಠೆಯ ವಿಷಯವೇ. ಆದರೆ ಅದನ್ನೆಲ್ಲ ಹಾಗೆ ಹೇಳಿಕೊಳ್ಳಲಾದೀತೇ? ಮತ್ತಾ ನಿವೇದನೆಯನ್ನು

